# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

BESCOM

## Bangalore Electricity Supply Company Limited

ಮು.ಪ್ರ.ವ್ಯ(ನಿ.ವ್ಯ)ರವರ ಕಛೇರಿ
ಕಂಪನಿ ಕಾರ್ಯಾಲಯ,
ಬೆ.ವಿ.ಕಂ. ಕೆ.ಆರ್.ವೃತ್ತ,
ಬೆಂಗಳೂರು-560001

**ವಿಷಯ** : ವಾಣಿಜ್ಯ, ಕಾರ್ಯ ಮತ್ತು ಪಾಲನ ವೃತ್ತ ಕಛೇರಿಗಳಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್(5)ರಡಿಯಲ್ಲಿನ ಸಾರ್ವಜನಿಕ ಮಾಹಿತಿ ಅಧಿಕಾರಿ/ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೊದಲ ಮೇಲ್ಮನವಿ ಪ್ರಾಧಿಕಾರಿಗಳನ್ನು ಮರು ನೇಮಿಸುವ ಕುರಿತು.

**ಪ್ರಸ್ತಾವನೆ:**

ಕರ್ನಾಟಕ ಮಾಹಿತಿ ಆಯೋಗದ ನಿರ್ದೇಶಾನುಸಾರ ಬೆ.ವಿ.ಕಂ.ನ ಪ್ರತಿ ವಲಯ/ ವೃತ್ತ/ ವಿಭಾಗ ಹಾಗೂ ಉಪ ವಿಭಾಗ ಕಛೇರಿಗಳಲ್ಲಿ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಸ್ವೀಕರಿಸುವ ಅರ್ಜಿಗಳಿಗೆ ನಿಖರವಾಗಿ ಹಾಗೂ ಕ್ಷಿಪ್ರವಾಗಿ ಸೂಕ್ತ ಮಾಹಿತಿಯನ್ನು ಒದಗಿಸುವ ಸಲುವಾಗಿ ಪ್ರತ್ಯೇಕ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ತತ್ಸಂಬಂಧ ಮುಖ್ಯಸ್ಥರುಗಳನ್ನು ಮೊದಲ ಮೇಲ್ಮನವಿ ಪ್ರಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಅದರಂತೆ ವೃತ್ತ ಕಛೇರಿಗಳಲ್ಲಿನ ಕಾರ್ಯನಿರ್ವಾಹಕ ಇಂಜನಿಯರ್(ವಿ)ರವರುಗಳು ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು.

ನಿಗಮ ವ್ಯಾಪ್ತಿಯಲ್ಲಿ ಬಂಡವಾಳ ಕಾಮಗಾರಿಗಳನ್ನು ಪೂರ್ವ ನಿರ್ಧರಿತ ಅವಧಿಯಲ್ಲಿ ಪೂರ್ಣಗೊಳಿಸಲು ಅನುಕೂಲವಾಗುವಂತೆ ಮೇಲ್ವಿಚಾರಣೆ ಅವಶ್ಯಕತೆಯಿದ್ದ ಹಿನ್ನೆಲೆಯಲ್ಲಿ ಈ ಹಿಂದೆ ಚಾಲ್ತಿಯಲ್ಲಿದ್ದ ಕಾಮಗಾರಿ ಘಟಕಗಳನ್ನು ಪುನರಾರಂಭಿಸಲು ದಿನಾಂಕ: 25.07.2015ರಲ್ಲಿ ಜರುಗಿದ ನಿರ್ದೇಶಕರ ಮಂಡಳಿ ಸಭೆಯಲ್ಲಿ ನಿರ್ಣಯಿಸಿದ್ದು, ಸದರಿ ನಿರ್ಣಯವನ್ನು ಜಾರಿಗೊಳಿಸಲು ವೃತ್ತ ಕಛೇರಿಗಳಿಗೆ ಮಂಜೂರಾಗಿದ್ದ ಕಾರ್ಯನಿರ್ವಾಹಕ ಇಂಜನಿಯರ್(ವಿ) ಹುದ್ದೆಗಳನ್ನು ಸ್ಥಳಾಂತರಿಸಿ ಕಾಮಗಾರಿ ವಿಭಾಗಗಳಿಗೆ ತೊಡಗಿಸಲಾಗಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದ ವೃತ್ತ ಕಛೇರಿಯ ಕಾರ್ಯನಿರ್ವಾಹಕ ಇಂಜನಿಯರ್(ವಿ)/ಸಾರ್ವಜನಿಕ ಮಾಹಿತಿ ಅಧಿಕಾರಿರವರ ಹುದ್ದೆಯು ವೃತ್ತ ಕಛೇರಿಯಲ್ಲಿ ಅಸ್ತಿತ್ವದಲ್ಲಿರುವುದಿಲ್ಲ. ಆದುದರಿಂದ ವೃತ್ತ ಕಛೇರಿಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿನ ಸಾರ್ವಜನಿಕ ಪ್ರಾಧಿಕಾರಿಗಳನ್ನು ಪರಿಷ್ಕರಿಸಿ ನೇಮಿಸಬೇಕಾಗಿರುವುದರಿಂದ ಈ ಆದೇಶ

**ಆದೇಶ ಸಂಖ್ಯೆ: ಬೆ.ವಿ.ಕಂ./ಬಿಸಿ-9/ಮು.ಪ್ರವ್ಯ(ನಿ.ವ್ಯ.)/ಉ.ಪ್ರವ್ಯ(ಮಾ.ಹ.)/ಕ-1(3)/2015-16/ಸಿವೈಎಸ್-** 44

**ದಿನಾಂಕ-** 21.11.2015

ಮಾಹಿತಿ ಹಕ್ಕು ಅಧಿನಿಯಮದಡಿ ವೃತ್ತ ಕಛೇರಿಗಳಲ್ಲಿನ ಅಧೀಕ್ಷಕ ಅಭಿಯಂತರು(ವಿ)ರವರನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿಯೂ, ಅವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು(ವಿ)ರವರನ್ನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿಯೂ ಹಾಗೂ ತತ್ಸಂಬಂಧ ವಲಯ ಕಛೇರಿಯ ಮುಖ್ಯ ಅಭಿಯಂತರು(ವಿ)ರವರನ್ನು ಮೊದಲ ಮೇಲ್ಮನವಿ ಪ್ರಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಅದರಂತೆ ಸದರಿ ಕಛೇರಿಗಳ ಸೂಚನಾ ಫಲಕವನ್ನು ಸೂಕ್ತವಾಗಿ ಮಾರ್ಪಡಿಸುವುದು.

| ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿದೆ. |
|---|

**ಆದೇಶದ ಮೇರೆಗೆ,**

(ಸಹಿ) 21/11/15

ಮುಖ್ಯ ಪ್ರಧಾನ ವ್ಯವಸ್ಥಾಪಕರು
(ನಿಗಮ ವ್ಯವಹಾರಗಳು)

**ಪ್ರತಿಗಳು:**

1. ಎಲ್ಲಾ ವಲಯದ ಮುಖ್ಯ ಇಂಜನಿಯರ್(ವಿ)ರವರುಗಳಿಗೆ, ಬೆ.ವಿ.ಕಂ.
2. ಎಲ್ಲಾ ವೃತ್ತದ ಅಧೀಕ್ಷಕ ಇಂಜನಿಯರ್(ವಿ)ರವರುಗಳಿಗೆ, ಬೆ.ವಿ.ಕಂ.
3. ಬೆ.ವಿ.ಕಂ ಅಂತರ್ಜಾಲ.
4. ಮಹಾ ಕಡತ.